# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 102 | Pages. 2 | Date: 24-03-2026, TUESDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 102 – ಪುಟಗಳು : 2 | 24-03-2026 | ಮಂಗಳವಾರ | Ph: 8762954248 | ದರ : ₹1


# ಯುವಕ ವರುಣ್ ಕೊಲೆ ಕೇಸ್: ಐವರು ಅರೆಸ್ಟ್

## 7 ಸಾವಿರ ಹಣ ಕೊಟ್ಟಿದ್ದ ಶಶಾಂಕ್ ಮತ್ತು ಸಹಚರರಿಂದ ಕೃತ್ಯ | ಸಾಕ್ಷ್ಯ ನಾಶಕ್ಕಾಗಿ ಶವ ದಹನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಸೀಕೆರೆ ತಾಲ್ಲೂಕಿನ ಜೇನುಕಲ್ ಸಿದ್ದೇಶ್ವರ ಸ್ವಾಮಿ ಬೆಟ್ಟದ ಸಮೀಪ ಸುಟ್ಟ ಸ್ಥಿತಿಯಲ್ಲಿ ಪತ್ತೆಯಾದ ಯುವಕನ ಶವ ಪ್ರಕರಣ ಸಂಬಂಧ ಐವರನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಕಾಡಯ್ಯನಕೊಪ್ಪಲು ಗ್ರಾಮದ ವರುಣ್ (22) ಕೊಲೆಯಾದ ದುರ್ದೈವಿ. ಹಾಸನದ ಶಶಾಂಕ್ ಎಂಬಾತ ಪ್ರಮುಖ ಆರೋಪಿಯಾಗಿದ್ದು ಆತನ ಎಂಟು ಸ್ನೇಹಿತರು ಸೇರಿ ಮಾ. 12ರ ರಾತ್ರಿ ವರುಣ್ ಮೇಲೆ ಹಲ್ಲೆ ನಡೆಸಿ ಕೊಲೆಗೈದು ನಂತರ ಜೇನುಕಲ್ ಸಿದ್ದೇಶ್ವರಸ್ವಾಮಿ ಬೆಟ್ಟದ ಸಮೀಪ ಶವ ಸುಟ್ಟು ಹಾಕಿದ್ದಾರೆ. ಮೃತ ವರುಣ್ ಗೆ ಶಶಾಂಕ್ ಎರಡು ತಿಂಗಳ ಹಿಂದೆ 7 ಸಾವಿರ ರೂ. ಕೊಟ್ಟಿದ್ದ. ಅದು ಯಾವ ಕಾರಣಕ್ಕೆ ಕೊಟ್ಟಿದ್ದ ಎಂಬುದು ತನಿಖೆ ಬಳಿಕ ಗೊತ್ತಾಗಲಿದೆ. ವಿಜಯ್ ನಾಯಕ್, ಉಮರ್, ಸತೀಶ್, ಚೇತನ್ ದಾಸರಕೊಪ್ಪಲು, ಮನು ಎಂಬುವರನ್ನು ಬಂಧಿಸಲಾಗಿದೆ ಎಂದರು.

### ಲೋಹಿತ್ ಎಸ್ಕೇಪ್ ಆಗಿದ್ದ

ಮಾ. 10ರಂದು ವರುಣ್ ಬೈಕ್ ರಿಪೇರಿ ಮಾಡಿಸಿಕೊಂಡು ಬರುತ್ತೇನೆಂದು ಗಂಡಸಿಗೆ ಸ್ನೇಹಿತ ಲೋಹಿತ್ ಜೊತೆಗೆ ಬಂದಿದ್ದ. ಅಲ್ಲಿಗೆ ಸ್ನೇಹಿತರೊಂದಿಗೆ ಬಂದ ಶಶಾಂಕ್‌ನು ವರುಣ್ ಹಾಗೂ ಲೋಹಿತ್‌ನನ್ನು ಕರೆದುಕೊಂಡು ಬರುತ್ತಾರೆ. ಮಾತಿಗೆ ಮಾತು ಬೆಳೆದು ಜಗಳ ವಿಕೋಪಕ್ಕೆ ತಿರುಗುತ್ತಿದ್ದಂತೆ ಲೋಹಿತ್ ಅಲ್ಲಿಂದ ಎಸ್ಕೇಪ್ ಆಗಿ ವರುಣ್ ಸಿಕ್ಕಿಬಿದ್ದಿದ್ದ ಎಂದರು.

ವರುಣ್ ಮನೆಗೆ ಬಾರದೆ ಇದ್ದರಿಂದ ಅವರ ತಾಯಿ ಗಂಡಸಿ ಠಾಣೆಯಲ್ಲಿ ಮಾ. 12ರಂದು ನಾಪತ್ತೆ ಪ್ರಕರಣ ದಾಖಲಿಸಿದ್ದರು. ಆದರೆ ಅಷ್ಟರಲ್ಲಾಗಲೇ ಅವನ ಕೊಲೆ ನಡೆದಿತ್ತು. ಕೊಲೆಗೂ ಮೊದಲು ಮನಸೋ ಇಚ್ಛೆ ಥಳಿಸಿದ್ದಾರೆ ಎಂಬ ಮಾಹಿತಿ ಮೊಬೈಲ್ ಕಾಲ್ ಲಿಸ್ಟ್, ರೆಕಾರ್ಡ್ ಇತ್ಯಾದಿ ಮೂಲಗಳಿಂದ ತಿಳಿದು ಬಂದಿದೆ. ಅದಾದ 2 ದಿನಗಳ ಅಂತರದಲ್ಲಿ ಮಾ.13-14ರ ನಡುವೆ ವರುಣ್ ಮೃತದೇಹವನ್ನು ಗುರುತು ಸಿಗದ ಹಾಗೆ ಶ್ರೀ ಜೇನುಕಲ್ ಸಿದ್ದೇಶ್ವರ ಸ್ವಾಮಿ ಬೆಟ್ಟದ ಪಕ್ಕ ಸುಟ್ಟು ಹಾಕಿದ್ದಾರೆ. ನಾಪತ್ತೆ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಆ ನಿಟ್ಟಿನಲ್ಲಿ ತನಿಖೆ ಕೈಗೊಂಡಿದ್ದರೆ ಹೊರತು ಕೊಲೆಯ ಸುಳಿವು ಆಗ ತಿಳಿಯಲಿಲ್ಲ ಎಂದು ವಿವರಿಸಿದರು.



### ಗೂಂಡಾ ಕಾಯ್ದೆ ದಾಖಲಿಸಲು ಮನವಿ

ಜಿಲ್ಲೆಯಲ್ಲಿ ಮಾದಕ ವಸ್ತುಗಳಾದ ಗಾಂಜಾ, ಡ್ರಗ್ಸ್ ಪ್ರಕರಣ ಹೆಚ್ಚುತ್ತಿವೆ. ಕಳೆದ ಮೂರು ತಿಂಗಳಲ್ಲಿ 20 ಪೆಡ್ಲರ್, 23 ಮಾದಕ ವಸ್ತು ಸೇವನೆ ಸೇರಿ 43 ಪ್ರಕರಣ ದಾಖಲಿಸಲಾಗಿದೆ. ಪೆಡ್ಲರ್ ಕೇಸಲ್ಲಿ 40, ಮತ್ತು ಬರುವ ಪದಾರ್ಥ ಸೇವನೆ ಪ್ರಕರಣದಲ್ಲಿ 33 ಸೇರಿ 73 ಮಂದಿಯನ್ನು ಬಂಧಿಸಲಾಗಿದೆ. ಈ ಅವಧಿಯಲ್ಲಿ 17.22 ಕೆ.ಜಿ. ಗಾಂಜಾ ವಶಪಡಿಸಿಕೊಳ್ಳಲಾಗಿದೆ. 13.81 ಲಕ್ಷ ರೂ. ಮೌಲ್ಯದ ಅಮಲು ಪದಾರ್ಥ ವಶಪಡಿಸಿಕೊಳ್ಳಲಾಗಿದೆ. ಮೂವರ ವಿರುದ್ಧ ಕೋಕೋ ಕಾಯ್ದೆ ವಿಧಿಸಲು ದಕ್ಷಿಣ ವಲಯ ಐಜಿಪಿ ಅವರ ಅನುಮತಿ ಕೋರಲಾಗಿದೆ ಎಂದು ತಿಳಿಸಿದರು.

### ಉಳಿದವರು ಸಿಕ್ಕ ಬಳಿಕ ಪೂರ್ಣ ಮಾಹಿತಿ

ವರುಣ್‌ನ ಮೃತದೇಹವನ್ನು ಬೈಕ್‌ನಲ್ಲಿ ಗಂಡಸಿಯಿಂದ ದುದ್ದ, ಅಲ್ಲಿಂದ ಜೇನುಕಲ್ ಬೆಟ್ಟಕ್ಕೆ ಸಾಗಿಸಿದ್ದಾರೆ ಎನ್ನಲಾಗಿದೆ. ಈ ನಡುವೆ ಹಾಸನ ಬಡಾವಣೆ ಠಾಣೆ ವ್ಯಾಪ್ತಿಯ ಮನೆಯಲ್ಲೂ ಒಂದು ದಿನ ವರುಣ್ ಶವ ಇಟ್ಟಿದ್ದರು ಎಂದು ತಿಳಿದು ಬಂದಿದ್ದು ನಾಪತ್ತೆಯಾಗಿರುವ ಆರೋಪಿಗಳ ಸಿಕ್ಕಬಳಿಕ ಆ ಬಗ್ಗೆ ಮಾಹಿತಿ ಲಭ್ಯವಾಗಲಿದೆ ಎಂದರು.

ಶಶಾಂಕ್ ವಿರುದ್ಧ ಬೇಲೂರು ಠಾಣೆಯಲ್ಲಿ ಪೆಡ್ಲರ್ ಪ್ರಕರಣ ದಾಖಲಾಗಿದೆ. ಉಳಿದವರ ವಿರುದ್ಧ ಅಪರಾಧ ಕೇಸ್‌ಗಳಿಲ್ಲ. ಆರೋಪಿಗಳಲ್ಲಿ ಹೆಚ್ಚು ಮಂದಿ ಡೆಲಿವರಿ ಬಾಯ್‌ಗಳಾಗಿ ಕೆಲಸ ಮಾಡುತ್ತಿದ್ದರು ಎಂದರು.

ಸಾಕ್ಷಿದಾರ ಲೋಹಿತ್ ಅವರ ಹೇಳಿಕೆ ಆಧರಿಸಿ ಮಾ.19 ರಂದು ದುದ್ದ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿತ್ತು. ಕೊಲೆ ಆರೋಪಿಗಳ ಪತ್ತೆಗಾಗಿ ವಿಶೇಷ ತನಿಖಾ ತಂಡ ರಚಿಸಲಾಗಿದೆ. ಎ1 ಆರೋಪಿ ಶಶಾಂಕ್ ಸೇರಿ ಉಳಿದವರನ್ನೂ ಶೀಘ್ರ ಬಂಧಿಸಲಾಗುವುದೆಂದರು.

# ಕೇಂದ್ರ ಸರ್ಕಾರದ ಅಧಿಕಾರಿಗಳ ಭೇಟಿ: ಆಶಾದಾಯಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾಡಾನೆ ಹಾವಳಿ ಹಾಗೂ ಸರ್ಫೇಸಿ ಕಾಯ್ದೆಯಿಂದ ಆಗುತ್ತಿರುವ ಅನಾನುಕೂಲಗಳ ಕುರಿತು ಚರ್ಚಿಸಲು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಕಾಫಿ ಬೆಳೆಗಾರರ ಸಂಘದ ನಿಯೋಗ ಕೈಗೊಂಡಿದ್ದ ಪ್ರವಾಸ ಫಲಪ್ರದವಾಗಿದೆ ಎಂದು ಮಾಜಿ ಶಾಸಕ ಹೆಚ್.ಕೆ.ಕುಮಾರಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಮಾ. 16ರಂದು ನಿಯೋಗ ದೆಹಲಿ ಪ್ರವಾಸ ಕೈಗೊಂಡಿತ್ತು. ವಾಣಿಜ್ಯ ಸಚಿವ ಪಿಯೂಷ್ ಗೋಯೆಲ್ ಅವರನ್ನು ಭೇಟಿಯಾಗಿ ಸರ್ಫೇಸಿ ಕಾಯ್ದೆಯ ಸಾಧಕ ಬಾಧಕಗಳ ಕುರಿತು ಮಾತುಕತೆ ನಡೆಸಲಾದೆ ಎಂದು ಹೇಳಿದರು.

ಆನೆ ಕಾರಿಡಾರ್ ನಿರ್ಮಾಣವೊಂದೇ ಕಾಡಾನೆ ಹಾಗೂ ಮಾನವ ಸಂಘರ್ಷ ತಡೆಗೆ ಶಾಶ್ವತ ಪರಿಹಾರವೆಂದು ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಡಲಾಯಿತು. ಆದರೆ ರಾಜ್ಯದ ಅರಣ್ಯ ಇಲಾಖೆ ಅಧಿಕಾರಿಗಳು ಕೇಂದ್ರಕ್ಕೆ ಸಮರ್ಪಕ ಮಾಹಿತಿ ನೀಡುವಲ್ಲಿ ವಿಫಲರಾಗಿದ್ದಾರೆ. ಮಲೆನಾಡು ಜನರ ಸಮಸ್ಯೆಗೆ ಪರಿಹಾರ ಸಿಗಬೇಕೆಂದರೆ ರಾಜ್ಯ ಸರ್ಕಾರವೂ ಆ ನಿಟ್ಟಿನಲ್ಲಿ ಯೋಚಿಸಬೇಕಾಗುತ್ತದೆ ಎಂದರು.




ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ಮೋಹನ್‌ಕುಮಾರ್ ಮಾತನಾಡಿ, ಸರ್ಫೇಸಿ ಕಾಯ್ದೆ ಸಂಬಂಧ ಕಾನೂನು ಹೋರಾಟದ ಅಗತ್ಯವಿದ್ದು, ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಸಚಿವರ ಸಹಕಾರ ಮತ್ತು ಸಹಾಯವನ್ನು ಕೋರಲಾಗಿದೆ. ಅದಕ್ಕೆ ಸಚಿವರಿಂದ ಸಕಾರಾತ್ಮಕ ಸ್ಪಂದನೆ ದೊರೆತಿದೆ ಎಂದರು.

ಕಾಫಿ ಬೆಳೆಗಾರರ ಸಂಘದ ಉಪಾಧ್ಯಕ್ಷ ಬಿ.ಎಂ.ನಾಗರಾಜ್, ಅದ್ದೂರಿ ಕುಮಾರ್, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಎಸ್.ದ್ಯಾವೇಗೌಡ, ಕಾಂತರಾಜ್ ಇದ್ದರು.

# ಎಂಸಿಇ ಕಾಲೇಜಿನಲ್ಲಿ ಮೂರು ದಿನಗಳ ಕಾರ್ಯಾಗಾರ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆಧುನಿಕ ತಂತ್ರಜ್ಞಾನ ಯುಗದಲ್ಲಿ ನಿರ್ಮಾಣ ಯೋಜನೆಗಳ ವಿನ್ಯಾಸ ಮತ್ತು ಕಾರ್ಯಗತಗೊಳಿಸುವಿಕೆಯಲ್ಲಿ ಮಹತ್ವದ ಬದಲಾವಣೆ ತರುತ್ತಿದೆ ಎಂದು ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್.ಟಿ.ದ್ಯಾವೇಗೌಡ ಹೇಳಿದರು.

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸಿವಿಲ್ ಇಂಜಿನಿಯರಿಂಗ್ ಹಾಗೂ ಸ್ಕಿಲ್ ಅಂಡ್ ಕನ್ಸಲ್ಟೆನ್ಸಿ ಕೇಂದ್ರದಿಂದ ಆಯೋಜಿಸಿದ್ದ ಬಿಲ್ಡಿಂಗ್ ಇನ್ಫರ್ಮೇಷನ್ ಮಾಡಲಿಂಗ್ (ಬಿ.ಐ.ಎಂ.) ಕುರಿತ ಮೂರು ದಿನಗಳ ಸಾಫ್ಟ್‌ವೇರ್ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ನಿರ್ಮಾಣ ಕ್ಷೇತ್ರದಲ್ಲಿ ಡಿಜಿಟಲ್ ಪರಿವರ್ತನೆ ಅನಿವಾರ್ಯವಾಗಿದೆ. ದ್ದು, ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಬಿಐಎಂ ತಂತ್ರಜ್ಞಾನವನ್ನು ಮೂಲಸೌಕರ್ಯ ಯೋಜನೆಗಳಲ್ಲಿ ಕಡ್ಡಾಯಗೊಳಿಸಲಾಗಿದೆ. ಭಾರತದಲ್ಲಿಯೂ ಅದರ ಅಳವಡಿಕೆ ವೇಗ ಪಡೆಯುತ್ತಿದೆ. ಇಂತಹ ತರಬೇತಿ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಸಹಕಾರಿ ಆಗಿದ್ದು, ವಿದ್ಯಾರ್ಥಿಗಳು ಸದುಪಯೋಗ ಪಡೆಯಬೇಕು ಎಂದು ಸಲಹೆ ನೀಡಿದರು. ಪ್ರಾಂಶುಪಾಲ ಡಾ. ಹೆಚ್.ಜೆ.ಅಮರೇಂದ್ರ, ಮಾತನಾಡಿ, ಬಿಐಎಂ ತಂತ್ರಜ್ಞಾನವು ನಿರ್ಮಾಣ ಕ್ಷೇತ್ರದಲ್ಲಿ ಯೋಜನೆ, ವಿನ್ಯಾಸ ಹಾಗೂ ಕಾರ್ಯಗತಗೊಳಿಸುವಿಕೆಯನ್ನು ಸುಧಾರಿಸುತ್ತಿದೆ ಎಂದರು.

ಹೈದರಾಬಾದ್‌ನ ತಜ್ಞ ಉದಯ ಶಂಕರ್ ರಾಮಸ್ವಾಮಿ ಅವರು ಕಾರ್ಯಕ್ರಮದ ರೂಪುರೇಷೆಯನ್ನು ಪರಿಚಯಿಸಿ, ನ್ಯಾವಿಸ್ ವರ್ಕ್ಸ್ ಸಾಫ್ಟ್‌ವೇರ್ ಬಳಕೆ ಮೂಲಕ ಪ್ರಾಜೆಕ್ಟ್ ಇಂಟಿಗ್ರೇಶನ್, ಕ್ಲ್ಯಾಶ್ ಡಿಟೆಕ್ಷನ್ ಹಾಗೂ ಸಿಮ್ಯುಲೇಶನ್ ವಿಧಾನಗಳನ್ನು ವಿವರಿಸಿದರು.

ಸ್ಕಿಲ್ ಅಂಡ್ ಕನ್ಸಲ್ಟೆನ್ಸಿ ಕೇಂದ್ರದ ಮುಖ್ಯಸ್ಥ ಡಾ. ಎ.ಜೆ. ಕೃಷ್ಣಯ್ಯ ಮಾತನಾಡಿ, ಇಂತಹ ಕಾರ್ಯಕ್ರಮಗಳು ಶೈಕ್ಷಣಿಕ ಹಾಗು ಉದ್ಯಮದ ಅವಶ್ಯಕತೆಗಳ ನಡುವಿನ ಅಂತರ ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆಂದು ಹೇಳಿದರು.

ಹೆಚ್.ಡಿ. ಪಾರ್ಶ್ವನಾಥ್, ಪ್ರೊ. ಡಾ. ಹೆಚ್.ಎಸ್. ನರಸಿಂಹನ್, ಡಾ. ಸುಮನಾ ಜೈಪ್ರಕಾಶ್, ಡಾ. ಕೆ.ಸಿ.ಮನು, ಸಿ.ಮಧುಶ್ರೀ, ಬಿ.ಎಸ್.ಶಮನಾ ಇತರರಿದ್ದರು.

# ಹಕ್ಕುಗಳ ಬಗ್ಗೆ ತಿಳಿಯುವುದು ಎಲ್ಲರ ಕರ್ತವ್ಯ: ಡಿಸಿ ಲತಾಕುಮಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಿತ್ಯ ಜೀವನದಲ್ಲಿ ವಸ್ತುಗಳನ್ನು ಖರೀದಿ ಮಾಡುವ ಪ್ರತಿಯೊಬ್ಬ ಗ್ರಾಹಕ ತನ್ನ ಹಕ್ಕುಗಳ ಬಗ್ಗೆ ತಿಳಿದು ಅರಿತಿರಬೇಕು, ಮಾರುಕಟ್ಟೆಯಲ್ಲಿ ಗ್ರಾಹಕರೇ ಪ್ರಭುಗಳು. ಖರೀದಿಸುವಾಗ ಪ್ರಶ್ನಿಸಿ ಕೇಳಿ ಖರೀದಿ ಮಾಡಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ ಹಾಗೂ ಮಹಿಳಾ ಪ್ರಥಮ ದರ್ಜೆ ಕಾಲೇಜು ವತಿಯಿಂದ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಏರ್ಪಡಿಸಿದ್ದ ವಿಶ್ವ ಗ್ರಾಹಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.



ಗ್ರಾಹಕರಿಗೆ ಇರುವ ಹಕ್ಕುಗಳ ಬಗ್ಗೆ ತಿಳಿಯಬೇಕು. ಸುರಕ್ಷತೆಯ ಹಕ್ಕು, ಮಾಹಿತಿ ಹಕ್ಕು, ಆಯ್ಕೆ ಮಾಡುವ ಹಕ್ಕು, ಕಾನೂನು ಜಾಹೀರಾತುಗಳ ಹಕ್ಕುಗಳ ಬಗ್ಗೆ ಅರಿತುಕೊಂಡು ಯಾವುದೇ ಸರಕು ಖರೀದಿಸುವಾಗ ಜಾಗೃತಿಯಿಂದ ಖರೀದಿಸಬೇಕು ಎಂದರು.

ಗ್ರಾಹಕರಿಗೆ ತನ್ನದೇ ಆದ ಹಕ್ಕುಗಳು ಇರುತ್ತವೆ. ಆದ್ದರಿಂದ ಯಾವುದೇ ಗ್ರಾಹಕರಿಗೆ ಖರೀದಿ ಮಾಡುವಾಗ ಮತ್ತು ಖರೀದಿ ಮಾಡಿದ ನಂತರ ತೊಂದರೆಯಾದರೆ ಕಾನೂನಿನ ಮೂಲಕ ದೂರು ಸಲ್ಲಿಸಿ ನ್ಯಾಯ ಪಡೆದುಕೊಳ್ಳಬಹುದು ಎಂದರು.

ಜೀವನದಲ್ಲಿ ಪ್ರತಿಯೊಂದು ಆಯ್ಕೆಯೂ ಕೂಡ ನಮ್ಮದೇ ಆಗಿರಬೇಕು. ಪ್ರತಿಯೊಂದು ಮಗು ಸಮಾಜದಲ್ಲಿ ಸ್ವಾವಲಂಬನೆಯಿಂದ ಬದುಕಬೇಕು. ತನ್ನದೇಯಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಿದರು.

ಎಂ.ಕೃಷ್ಣ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ಹೆಚ್.ಎಸ್. ಹೇಮಂತ್ ಕುಮಾರ್ ಮಾತನಾಡಿ, ಸಮಾಜದಲ್ಲಿ ಪ್ರತಿ ಒಬ್ಬರು ಕೂಡ ಗ್ರಾಹಕರೇ. ಆದ್ದರಿಂದ ತಮ್ಮದೇ ಆದ ಹಕ್ಕುಗಳು ಅನ್ವಯದ ಮೂಲಕ ಪ್ರಶ್ನೆ ಮಾಡಿ ನ್ಯಾಯ ದಕ್ಕಿಸಿಕೊಳ್ಳಬೇಕು ಎಂದರು.

ಗ್ರಾಹಕರು ಸ್ಥಾನಮಾನ ಹಕ್ಕುಗಳಲ್ಲಿ ಹಲವು ಬದಲಾವಣೆ ಆಗುತ್ತದೆ. ಮೂಲವಾಗಿ ಕಂಡುಬರುವುದು ಅಂತರ್ಜಾಲದ ಮೂಲಕ ಸರಕುಗಳನ್ನು ಖರೀದಿ ಮಾಡುವುದು ಹೆಚ್ಚಾಗಿ ಕಂಡುಬರುತ್ತದೆ. ಆದ್ದರಿಂದ ಸುರಕ್ಷಿತವಾದ ಉತ್ಪನ್ನಗಳನ್ನು ಖರೀದಿ ಮಾಡುವುದು ಬಹಳ ಕಡಿಮೆ ಎಂದು ತಿಳಿಸಿದರು.

ಗ್ರಾಹಕರು ಯಾವುದೇ ವಸ್ತುಗಳನ್ನು ಖರೀದಿ ಮಾಡುವಾಗ ಆ ವಸ್ತುಗಳ ಬಗ್ಗೆ ಸಂಪೂರ್ಣವಾಗಿ ಪರಿಶೀಲನೆ ಮಾಡಿ ಎಚ್ಚರಿಕೆಯಿಂದ ಖರೀದಿ ಮಾಡಬೇಕು ಮತ್ತು ಆ ವಸ್ತುವಿನ ಕೊನೆಯ ದಿನಾಂಕವನ್ನು ಗಮನಿಸಬೇಕು ಎಂದರು.

ಹೆಚ್ಚಾಗಿ ಎಲ್ಲರೂ ಕೂಡ ಜಾಹೀರಾತುಗಳ ಮೇಲೆ ಅವಲಂಬಿತರಾಗಿದ್ದು, ಅದರಲ್ಲೂ ಕೂಡ ಹೆಚ್ಚಾಗಿ ಮಕ್ಕಳನ್ನು ಅವಲಂಬಿಸಿ ಜಾಹೀರಾತು ನೀಡುತ್ತಾರೆ ಹಾಗೂ ಎಲ್ಲಾ ಜಾಹಿರಾತುಗಳು ಕೂಡ ವಿಭಿನ್ನ ರೀತಿಯ ಸರಕುಗಳ ಆಧಾರಿಸಿ ಜಾಹಿರಾತುಗಳನ್ನು ನೀಡುತ್ತಾರೆ ಎಂದು ತಿಳಿಸಿದರು.

ಗ್ರಾಹಕರು ಸರಕುಗಳನ್ನು ಖರೀದಿ ಮಾಡಿದ ನಂತರ ಆ ವಸ್ತುಗಳಿಂದ ತೊಂದರೆ ಆದರೆ ನೇರವಾಗಿ ದೂರನ್ನು ನೀಡಬಹುದು ಮತ್ತು ಕಾನೂನಿನ ಮೂಲಕ ತೊಂದರೆಗಳಿಗೆ ನೇರವಾಗಿ ಪರಿಹಾರ ದೂರಕುತ್ತದೆ ಎಂದು ಹೇಳಿದರು.

ಹಕ್ಕುಗಳನ್ನು ಕೇಳುವುದು ಮತ್ತು ಪಡೆದುಕೊಳ್ಳುವುದು ಪ್ರತಿಯೊಬ್ಬ ಗ್ರಾಹಕರ ಹಕ್ಕು ಹಾಗೂ ಸರಕುಗಳನ್ನು ಖರೀದಿ ಮಾಡುವಾಗ ಬಹು ಎಚ್ಚರಿಕೆ ಇಂದ ಖರೀದಿ ಮಾಡಬೇಕು ಹಾಗೂ ಸುತ್ತಲಿನ ಪರಿಸರದ ಸುರಕ್ಷತೆಯನ್ನು ಕಾಪಾಡುವ ನಿಟ್ಟಿನಲ್ಲಿ ಆಹಾರ ಪದಾರ್ಥಗಳನ್ನು ಖರೀದಿ ಮಾಡುವುದು ಉತ್ತಮವಾದ ಆಲೋಚನೆ ಆಗಿರಬೇಕು ಎಂದರು.

ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕ ಅರುಣ್ ಕುಮಾರ್, ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಕವಿತ, ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ ಕಾರ್ಯಾಧ್ಯಕ್ಷರಾದ ಸಿದ್ದಯ್ಯ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಜಾಗಕ್ಕಾಗಿ ಜಗಳ: ಮಹಿಳೆ ಸೇರಿ ಮೂವರ ಮೇಲೆ ಹಲ್ಲೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಮನೆ ಮುಂದಿನ ರಸ್ತೆ ವಿಚಾರವಾಗಿ ಮೂವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಹಂಚಿಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರಮೇಶ, ಕಿರಣಕುಮಾರ್ ಹಾಗೂ ಸುಶೀಲಾ ಗಾಯಾಳುಗಳು. ಅದೇ ಊರಿನ ಗಂಗಾಬೋವಿ, ಶಿವಕುಮಾರ, ಕಿರಣ್, ಸೋಮ, ಆನಂದ, ಪ್ರತಾಪ್, ಪುನೀತ್, ಪ್ರಸನ್ನ, ನಾಗಬೋವಿ ಮತ್ತು ಮಂಜಾಬೋವಿ ಎಂಬುವವರು ಹಲ್ಲೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

ಸರ್ಕಾರಿ ಜಾಗದಲ್ಲಿ ರಸ್ತೆ ನಿರ್ಮಿಸಿಕೊಡುವಂತೆ ಗೋವಿಂದಪ್ಪ ಅವರು ಮಾ. 21 ರಂದು ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದ್ದರು. ಆ ಹಿನ್ನೆಲೆಯಲ್ಲಿ ಕಂದಾಯ ಇಲಾಖೆ ಸಿಬ್ಬಂದಿ ಅಳತೆ ಮಾಡಿ ರಸ್ತೆ ಮಾಡಿಸಿಕೊಟ್ಟಿದ್ದರು. ಗೋವಿಂದಪ್ಪ ಹಾಗು ಕುಟುಂಬಸ್ಥರು ನಿಗದಿತ ಜಾಗದಲ್ಲಿ ತಂತಿ ಬೇಲಿ ಅಳವಡಿಸುತ್ತಿದ್ದಾಗ ಅಲ್ಲಿಗೆ ಬಂದ ಆರೋಪಿಗಳು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಹಲ್ಲೆ ಮಾಡಿದ್ದಾರೆ. ಗಾಯಾಳುಗಳು ಹಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸ್ವ-ಉದ್ಯೋಗ ತರಬೇತಿ ಕೇಂದ್ರದಲ್ಲಿ ವಸ್ತು ಕಳವು

ಹಾಸನ: ರಾತ್ರೋ ರಾತ್ರಿ ಕಚೇರಿ ಕಚೇರಿಗೆ ನುಗ್ಗಿರುವ ಕಳ್ಳರು 29 ಸಾವಿರ ರೂ. ಮೌಲ್ಯದ ವಸ್ತುಗಳ ಕದ್ದಿರುವ ಘಟನೆ ಕೈಗಾರಿಕಾ ಪ್ರದೇಶದಲ್ಲಿರುವ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಕೇಂದ್ರದಲ್ಲಿ ನಡೆದಿದೆ.

ಮಾ. 21ರ ಬೆಳಗಿನ ಜಾವ ಕಿಡಿಗೇಡಿಗಳು ಕೇಂದ್ರದ ಅಡುಗೆ ಕೋಣೆಯ ಬೀಗ ಮುರಿದು ನಲ್ಲಿ ಹಾಗೂ ಇತರೆ ವಸ್ತುಗಳನ್ನು ಕಳವು ಮಾಡಿದ್ದಾರೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಾ. 25ಕ್ಕೆ ಹಾಸನದಲ್ಲಿ ಸ್ವಾಭಿಮಾನ ನಡಿಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮಾ. 25ರಂದು ನಗರದಲ್ಲಿ ಸ್ವಾಭಿಮಾನ ನಡಿಗೆ ಹಮ್ಮಿಕೊಳ್ಳಲಾಗಿದೆ ಎಂದು ಲಿಂಗತ್ವ ಮತ್ತು ಲೈಂಗಿಕ ಬಹುತ್ವಕ್ಕಾಗಿ ಚಳವಳಿ ಸದಸ್ಯೆ ಮಂಜಮ್ಮ ಜೋಗತಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಪ್ರತ್ಯೇಕ ನಿಗಮ ಸ್ಥಾಪನೆ, ಕನಿಷ್ಟ 250 ಕೋಟಿ ರೂ. ಅನುದಾನ ಮೀಸಲಿಡುವುದು ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಸರ್ಕಾರಕ್ಕೆ ಆಗ್ರಹಿಸಲಾಘುವುದು. ಬುಧವಾರ ಬೆಳಿಗ್ಗೆ 11 ಗಂಟೆಗೆ ಹೇಮಾವತಿ ಪ್ರತಿಮೆಯಿಂದ ನಡಿಗೆ ಪ್ರಾರಂಭವಾಗಿ ಅಂಬೇಡ್ಕರ್ ಭವನ ತಲುಪಲಿದೆ. ಸಾರ್ವಜನಿಕ ಸಭೆಯು ಅಂಬೇಡ್ಕರ್ ಭವನದಲ್ಲಿ ನಡೆಯಲಿದೆ ಎಂದರು.




ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಹಿತರಕ್ಷಣೆಗೆ ಸರ್ಕಾರ ಮುಂದಾಗಬೇಕು. ಉತ್ತಮ ವಸತಿ, ಆರೋಗ್ಯ, ಶಿಕ್ಷಣ ಹಾಗು ಉದ್ಯೋಗ ಸೌಲಭ್ಯ ಒದಗಿಸಬೇಕು. ಉಚಿತ ಲಿಂಗತ್ವ ದೃಢೀಕರಣ ಶಸ್ತ್ರ ಚಿಕಿತ್ಸೆ, ಪ್ರತಿ ಜಿಲ್ಲೆಯಲ್ಲಿ ವಿಶೇಷ ಆರೋಗ್ಯ ಕೇಂದ್ರ, ಹಾಗೂ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೊಳಿಸಬೇಕೆಂದು ಆಗ್ರಹಿಸಿದರು.

1969ರಲ್ಲಿ ಅಮೇರಿಕದ ನ್ಯೂಯಾರ್ಕ್ ನಗರದ ಸ್ಟೋನ್ ವಾಲ್ ಇನ್ ಬಾರ್ ಮೇಲೆ ನಡೆದ ಪೊಲೀಸ್ ದಾಳಿ ವಿರುದ್ಧ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರು ತೋರಿದ ಪ್ರತಿರೋಧವು ವಿಶ್ವದಾದ್ಯಂತ ಚಳವಳಿಗೆ ದಾರಿ ಮಾಡಿಕೊಟ್ಟಿದೆ. ಅದರ ನೆನಪಿನಲ್ಲಿ ಪ್ರತಿವರ್ಷ ಸ್ವಾಭಿಮಾನ ನಡಿಗೆ ಹಮ್ಮಿಕೊಳ್ಳಲಾಗುತ್ತಿದೆ ಎಂದು ವಿವರಿಸಿದರು.

ನಿರಂತರ ಹೋರಾಟದ ಪರಿಣಾಮ ಕರ್ನಾಟಕದಲ್ಲಿ ಸರ್ಕಾರಿ ಉದ್ಯೋಗಗಳಲ್ಲಿ ಶೇ. 1 ಮೀಸಲಾತಿ, ಉಚಿತ ಬಸ್ ಪ್ರಯಾಣ ಸೇರಿ ಹಲವು ಸೌಲಭ್ಯಗಳು ದೊರೆತಿವೆ. 2026-27ರ ರಾಜ್ಯ ಬಜೆಟ್‌ನಲ್ಲಿ ಈ ಸಮುದಾಯದ ಅಭಿವೃದ್ಧಿಗೆ ಅನುದಾನ ಘೋಷಿಸದಿರುವುದು ಬೇಸರ ತರಿಸಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮರಿ ಜೋಸೆಫ್, ಅದಿಲ್, ಟಿ.ಎನ್. ಮಂಜುನಾಥ್, ನವೀನ್ ಕುಮಾರ್, ಮಾರ್ತಮ್ಮ ಇತರರಿದ್ದರು.

# ಏ. 5ಕ್ಕೆ ಬಾಬೂಜಿ, 14ಕ್ಕೆ ಅಂಬೇಡ್ಕರ್ ಜಯಂತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲೂಕು ಆಡಳಿತದ ವತಿಯಿಂದ ಏ. 5ರಂದು ಡಾ. ಬಾಬು ಜಗಜೀವನ ರಾಂ ಹಾಗೂ ಏ. 14ರಂದು ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಜಯಂತ್ಯುತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ತಿಳಿಸಿದರು.

ಪಟ್ಟಣದ ಮಿನಿ ವಿಧಾನಸೌಧ ಸಭಾಂಗಣದಲ್ಲಿ ಸೋಮವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಬಾಬು ಜಗಜೀವನರಾಂ ಅವರು ಸೃಷ್ಟಿಸಿದ ಹಸಿರು ಕ್ರಾಂತಿಯಿಂದ ದೇಶದಲ್ಲಿ ಬಡವರಿಗೆ ಆಹಾರದ ಕೊರತೆ ದೂರವಾಯಿತು. ಹಸಿರು ಕ್ರಾಂತಿಯ ಹರಿಕಾರ ಬಾಬೂಜಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಮುಖ್ಯರಾಗಿದ್ದಾರೆ ಎಂದರು.

ಡಾ. ಬಿ.ಆರ್. ಅಂಬೇಡ್ಕರ್ ಅವರು ರಚಿಸಿದ ಸಂವಿಧಾನವೇ ದೇಶದ 140 ಕೋಟಿ ಜನರು ನೆಮ್ಮದಿಯಿಂದ ಬದುಕಲು ಕಾರಣ. ಇಂತಹ ಮಹನೀಯರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಿದಾಗ ಮಾತ್ರ ಮಹಾತ್ಮರಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ. ತಾಲ್ಲೂಕು ಮಟ್ಟದಲ್ಲಿ ಬಾಬು ಜಗಜೀವನರಾಂ ಮತ್ತು ಡಾ. ಅಂಬೇಡ್ಕರ್ ಜಯಂತಿಗಳನ್ನು ಪ್ರತ್ಯೇಕವಾಗಿ ಆಚರಿಸಬೇಕೆಂದು ಕೆಲವು ಮುಖಂಡರ ಸಲಹೆಯ ಮೇರೆಗೆ ಏ. 5 ರಂದು ಡಾ. ಬಾಬು ಜಗಜೀವನ ರಾಂ ಅವರ 119ನೇ ಜಯಂತ್ಯುತ್ಸವವನ್ನು ಸರಳವಾಗಿ ಆಚರಿಸಲಾಗುವುದು ಎಂದರು.



ಡಾ. ಬಿ.ಆರ್ ಅಂಬೇಡ್ಕರ್ ಅವರ ಜಯಂತಿಯಂದು ಭವ್ಯ ಮೆರವಣಿಗೆ ಹಮ್ಮಿಕೊಳ್ಳಲಾಗುವುದು. ಉಪನ್ಯಾಸಕರಿಂದ ಭಾಷಣ ಆಯೋಜನೆ, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಹಾಗು ಸಮಾಜದ ಏಳಿಗೆಗಾಗಿ ಶ್ರಮಿಸಿದ ಸಾಧಕರನ್ನು ಸನ್ಮಾನಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಸಭೆಯಲ್ಲಿ ತಹಶೀಲ್ದಾರ್ ಜಿ.ಎಸ್.ಶಂಕರಪ್ಪ, ಪುರಸಭಾ ಮಾಜಿ ಅಧ್ಯಕ್ಷ ಸಿ.ಎನ್.ಮೋಹನ್, ಮುಖ್ಯಾಧಿಕಾರಿ ಆರ್.ಯತೀಶ್ ಕುಮಾರ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಜಿ.ಆರ್. ಹರೀಶ್, ಚನ್ನರಾಯಪಟ್ಟಣ ಉಪ ವಿಭಾಗ ಪೊಲೀಸ್ ಉಪ ಅಧೀಕ್ಷಕ ಎನ್.ಕುಮಾರ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಡಿ.ಆರ್. ತ್ಯಾಗರಾಜು, ದಲಿತ ಮುಖಂಡರಾದ ಬೆಳಗಿಹಳ್ಳಿ ಪುಟ್ಟಸ್ವಾಮಿ, ದಂಡೋರ ಮಂಜುನಾಥ್, ಆಲದಹಳ್ಳಿ ವೆಂಕಟೇಶ್, ಪ್ರಕಾಶ್ ಇತರರಿದ್ದರು.

# ಸರ್ಕಾರಿ ಶಾಲೆಗಳ ಜಮೀನು ಖಾತೆಗೆ ವಿಘ್ನ

## 2018ರಲ್ಲೇ ಸರ್ಕಾರ ಆದೇಶಿಸಿದರೂ ಪೂರ್ಣಗೊಳ್ಳದ ಕೆಲಸ | ಶಿಕ್ಷಕರಿಗೆ ಕೆಲಸದ ಹೊರೆ


**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸರ್ಕಾರಿ ಶಾಲೆಯ ಹೆಸರಿಗೆ ಜಮೀನು ಖಾತೆ ಮಾಡಿಕೊಳ್ಳುವಂತೆ ಶಿಕ್ಷಣ ಇಲಾಖೆ ಹಾಗು ಕಂದಾಯ ಇಲಾಖೆ ಸೂಚನೆ ಹೊರಡಿಸಿದ್ದರೂ ಜಿಲ್ಲೆಯ 1057 ಶಾಲೆಗಳಿಗೆ ಇನ್ನೂ ಖಾತೆ ಹೊಂದಲು ಸಾಧ್ಯವಾಗಿಲ್ಲ.

ಸರ್ಕಾರಿ ಶಾಲೆಗಳ ಸ್ಥಿರಾಸ್ತಿಗಳನ್ನು ಆಯಾ ಶಾಲೆಗಳ ಹೆಸರಿಗೆ ಖಾತೆ ಮಾಡಿಸಿ ಆರ್‌ಟಿಸಿಯಲ್ಲಿ ನಮೂದಿಸಿ ಕೊಡುವಂತೆ ರಾಜ್ಯ ಶಿಕ್ಷಣ ಇಲಾಖೆ, ಕಂದಾಯ ಇಲಾಖೆ 2018ರ ಏ. 28ರಂದು ಆದೇಶಿಸಿದೆ. ಈ ಕುರಿತು ಜಿಲ್ಲಾಡಳಿತ, ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಕ್ರಮ ಕೈಗೊಳ್ಳಲಾಗಿದೆಯಾದರೂ 6 ವರ್ಷದಲ್ಲಿ 1385 ಶಾಲೆಗಳಿಗೆ ಮಾತ್ರ ಖಾತೆ ಮಾಡಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ ಒಟ್ಟು 2442 ಸರ್ಕಾರಿ ಪ್ರಾಥಮಿಕ ಹಾಗು ಪ್ರೌಢ ಶಾಲೆಗಳಿವೆ.

### ತಾಲ್ಲೂಕುವಾರು ವಿವರ

ಆಲೂರು ತಾಲ್ಲೂಕಿನಲ್ಲಿ 167 ಶಾಲೆಗಳಿದ್ದು 83 ಖಾತೆ ಆಗಿದೆ. 84 ಶಾಲೆಗಳಿಗೆ ಇನ್ನೂ ಖಾತೆ ಆಗಬೇಖಿದ್ದು ಗ್ರಾಪಂ ವ್ಯಾಪ್ತಿಯಲ್ಲಿ 12, ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 2 ಹಾಗು ತಹಶೀಲ್ದಾರ್ ಖಾತೆ ಮಾಡಬೇಕಾದ ಶಾಲೆಗಳ ಸಂಖ್ಯೆ 70 ಇದೆ. ಅರಕಲಗೂಡು ತಾಲ್ಲೂಕಿನ 355 ಶಾಲೆಗಳ ಪೈಕಿ 238 ಶಾಲೆಗೆ ಖಾತೆಯಾಗಿದ್ದು, 117 ಶಾಲೆಗಳ ಭವಿಷ್ಯ ಇನ್ನು ಅತಂತ್ರವಾಗಿದೆ. ಗ್ರಾಪಂ ವ್ಯಾಪ್ತಿಯಲ್ಲಿ 7, ಪಟ್ಟಣ ಪಂಚಾಯಿತಿ 11 ಹಾಗು ತಹಶೀಲ್ದಾರ್ ಕಚೇರಿಯಲ್ಲಿ 99 ಶಾಲೆಗಳ ಕಡತಗಳಿವೆ. ಅರಸೀಕೆರೆ ತಾಲ್ಲೂಕಿನಾದ್ಯಂತ 404 ಶಾಲೆಗಳಿದ್ದು 237 ಖಾತೆ ಹೊಂದಿವೆ. 167 ಶಾಲೆಗಳಿಗೆ ಖಾತೆ ಆಗಬೇಕಿದ್ದು ಗ್ರಾಪಂಗೆ 45, ನಗರಸಭೆ 7 ಹಾಗು 115 ಶಾಲಾ ದಾಖಲಾತಿ ತಹಶೀಲ್ದಾರ್ ಕಚೇರಿಯಲ್ಲಿವೆ. ಬೇಲೂರಿನ 280 ಶಾಲೆ ಪೈಕಿ 101 ಶಾಲೆಗೆ ಖಾತೆ ಆಗಿದ್ದು ಇನ್ನೂ 179 ಬಾಕಿ ಇದೆ. ಗ್ರಾಪಂ 60, ಪುರಸಭೆ 2 ಹಾಗು ತಹಶೀಲ್ದಾರ್ 117 ಕಡತಗಳ ವಿಲೇವಾರಿ ಮಾಡಬೇಕಿದೆ. ಮೂರು ಶಾಲೆಗಳ ಜಾಗದ ವಿಚಾರ ನ್ಯಾಯಾಲಯ ಮೆಟ್ಟಿಲೇರಿದೆ.



ಚನ್ನರಾಯಪಟ್ಟಣದ 379 ಶಾಲೆಗಳ ಪೈಕಿ 169 ಶಾಲೆಗಳು ಖಾತೆ ಹೊಂದಿದ್ದು, 210 ಶಾಲೆಗಳಿಗೆ ಖಾತೆ ಆಗಿಲ್ಲ. ಹಾಸನ ತಾಲ್ಲೂಕಿನ 386 ಶಾಲೆಗಳ ಪೈಕಿ 250 ಶಾಲೆಗಳು ಖಾತೆ ಹೊಂದಿವೆ. 136 ಶಾಲೆಗಳು ಇನ್ನು ಪ್ರಗತಿ ಹಂತದಲ್ಲಿದ್ದು ಗ್ರಾಪಂಗೆ 16, ಮಹಾನಗರ ಪಾಲಿಕೆ ವ್ಯಾಪ್ತಿಗೆ 22 ಹಾಗು ತಹಶೀಲ್ದಾರ್ ವ್ಯಾಪ್ತಿಗೆ 98 ಶಾಲೆಗಳು ಸೇರಿವೆ. ಹೊಳೆನರಸೀಪುರದ 303 ಶಾಲೆಗಳ ಪೈಕಿ 267 ಶಾಲೆಗೆ ಖಾತೆ ಮಾಡಿಕೊಡಲಾಗಿದೆ. ಬಾಕಿ ಇರುವ 36 ಶಾಲೆಗಳಲ್ಲಿ 21 ಗ್ರಾಪಂ, 8 ಪುರಸಭೆ ಹಾಗು 7 ಶಾಲೆಗಳು ತಹಶೀಲ್ದಾರ್ ಕಡೆಯಿಂದ ಖಾತೆ ಆಗಬೇಕಿದೆ. ಸಕಲೇಶಪುರ ತಾಲ್ಲೂಕಿನ 168 ಶಾಲೆಗಳ ಪೈಕಿ 40 ಶಾಲೆಗಳು ಖಾತೆ ಹೊಂದಿದ್ದರೆ 128 ಶಾಲೆಗಳ ಖಾತೆ ಆಗಬೇಕಿದೆ. ಅದರಲ್ಲಿ ಗ್ರಾಪಂಗೆ 5, ಪುರಸಭೆಯಲ್ಲಿ 6 ಹಾಗೂ 117 ಶಾಲೆಗಳು ತಹಶೀಲ್ದಾರ್ ಕಡೆಯಿಂದ ಸುಖಾಂತ್ಯ ಕಾಣಬೇಕಿದೆ.

### ಶಿಕ್ಷಣದ ಮೇಲೆ ಪರಿಣಾಮ

ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಭೂಮಿ, ಕಟ್ಟಡ, ಕ್ರೀಡಾಂಗಣ, ಕುಡಿಯುವ ನೀರು, ಶೌಚಾಲಯ ಮುಂತಾದ ಆಸ್ತಿಗಳ ಸ್ಪಷ್ಟ ದಾಖಲೆಗಳು ಲಭ್ಯವಿಲ್ಲ. ಕೆಲವು ಕಡೆ ಶಾಲಾ ಜಾಗದ ಮೇಲೆಯೇ ವಿವಾದಗಳು ಹುಟ್ಟಿಕೊಂಡಿರುವುದೂ ಕಂಡುಬರುತ್ತಿದೆ.

ಅದರ ಪರಿಣಾಮವಾಗಿ ಶಿಕ್ಷಕರ ಮೇಲೆ ಹೆಚ್ಚುವರಿ ಹೊರೆ ಬಿದ್ದಿದೆ. ಪಾಠ ಬೋಧನೆ ಮಾಡಬೇಕಾದ ಶಿಕ್ಷಕರು ಈಗ ದಾಖಲೆಗಳನ್ನು ಸಂಗ್ರಹಿಸುವುದು, ಅಧಿಕಾರಿಗಳ ಮುಂದೆ ವಿವರ ನೀಡುವುದು, ದಾಖಲೆ ಪರಿಶೀಲನೆಗೆ ಹಾಜರಾಗುವುದು ಇತ್ಯಾದಿ ಕೆಲಸಗಳಲ್ಲಿ ತೊಡಗಿಕೊಳ್ಳಬೇಕಾಗಿದೆ. ಹೀಗಾಗಿ ಮಕ್ಕಳ ವ್ಯಾಸಂಗದ ಮೇಲೆ ಗಮನ ಕೇಂದ್ರಿಕರಿಸಲು ಸಾಧ್ಯವಾಗುತ್ತಿಲ್ಲ.

ಶಾಲೆಯ ಮುಖ್ಯ ಗುರಿಯಾದ ಮಕ್ಕಳ ಕಲಿಕೆ ಮತ್ತು ಅಭಿವೃದ್ಧಿ ಹಿಂದುಳಿಯುತ್ತಿದೆ. ವಿಶೇಷವಾಗಿ ಗ್ರಾಮೀಣ ಭಾಗದ ಶಾಲೆಗಳಲ್ಲಿ ಈ ಸಮಸ್ಯೆ ತೀವ್ರವಾಗಿದೆ. ಸರ್ಕಾರಿ ಶಾಲೆಗಳ ಖಾತೆ ಹೊಂದುವುದು ಕಡ್ಡಾಯವೆಂದು ಸರ್ಕಾರ ಆದೇಶಿಸಿದ್ದರೂ ಈ ನಿಟ್ಟಿನಲ್ಲಿ ವೇಗದ ಕೆಲಸ ನಡೆಯುತ್ತಿಲ್ಲ. ಅಧಿಕಾರಿಗಳು ಸೂಚಿಸಿದಾಗ, ನ್ಯಾಯಾಲಯ ವಿಚಾರಣೆ ಇದ್ದಾಗ ಮಾತ್ರ ಶಿಕ್ಷಕರು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸುತ್ತಿದ್ದಾರೆ ಹೊರತು ಬೇರೆ ಸಮಯದಲ್ಲಿ ಆ ಕಡೆಗೆ ಯೋಚಿಸುತ್ತಿಲ್ಲವೆಂಬ ಆರೋಪಗಳು ಕೇಳಿಬಂದಿವೆ.

# ಮಾ.30ಕ್ಕೆ ಫಲಾನುಭವಿಗಳಿಗೆ 328 ಮನೆಗಳ ಹಸ್ತಾಂತರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಸೀಕೆರೆ: ನಗರ ವ್ಯಾಪ್ತಿಯಲ್ಲಿ ಹೌಸಿಂಗ್ ಫಾರ್ ಆಲ್ ಯೋಜನೆಯಡಿ ನಿರ್ಮಾಣವಾಗಿರುವ 328 ಮನೆಗಳನ್ನು ಮಾ. 30 ರಂದು ಫಲಾನುಭವಿಗಳಿಗೆ ವಿತರಿಸಲಾಗುವುದು ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಭರವಸೆ ನೀಡಿದರು.

ನಗರಸಭೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದ ವಸತಿ ರಹಿತರಿಗೆ ಸೂರು ನಿರ್ಮಿಸಿಕೊಡುವ ದಶಕದ ಕನಸು ಕೊನೆಗೂ ನನಸಾಗಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಂಯುಕ್ತ ಆಶ್ರಯದಲ್ಲಿ ಫಲಾನುಭವಿಯಿಂದಲೂ ಒಂದು ಲಕ್ಷ ರೂ. ಸ್ವೀಕರಿಸಿ ಈಗಾಗಲೇ ಸಿದ್ಧವಾಗಿರುವ ಮನೆಗಳನ್ನು ವಿತರಿಸಲಾಗುವುದು ಎಂದು ಹೇಳಿದರು.

ಬಡವರು ಹಾಗೂ ನಿರ್ಗತಿಕರಿಗೆ ಸದೃಢ ಮನೆಯೊಂದನ್ನು ನಿರ್ಮಿಸಿ ಕೊಡುವ ಸಂಕಲ್ಪದೊಂದಿಗೆ ಹೌಸಿಂಗ್ ಫಾರ್ ಆಲ್ ಯೋಜನೆಯನ್ನು ಕೈಗೆತ್ತುಕೊಂಡು 1181 ಮನೆಗಳನ್ನು ನಿರ್ಮಿಸುವ ಮಹತ್ವಕಾಂಕ್ಷಿ ಯೋಜನೆಯಲ್ಲಿ ಮೊದಲ ಹಂತವಾಗಿ 328 ಮನೆಗಳು ಪೂರ್ಣಗೊಂಡಿವೆ. 412 ಮನೆಗಳಿಗೆ ಆರ್‌ಸಿಸಿ ಹಾಕಲಾಗಿದ್ದು 252 ಮನೆಗಳ ಕಾಮಗಾರಿ ಪ್ರಗತಿಯಲ್ಲಿದೆ. ಆದರೆ ಫಲಾನುಭವಿಗಳು ಮನೆ ಪಡೆದುಕೊಳ್ಳಲು ಮೀನಾಮೇಷ ಎಣಿಸುತ್ತಿದ್ದಾರೆ ಎಂದರು.

25 ಲಕ್ಷ ರೂ.ಗೆ ಹೆಚ್ಚು ಬೆಲೆ ಬಾಳುವ ಮನೆಯನ್ನು ಪಡೆಯಲು ಫಲಾನುಭವಿ ಕೇವಲ ಒಂದು ಲಕ್ಷ ನೀಡಿದರೆ ಸಾಕು. ಆ ಒಂದು ಲಕ್ಷ ರೂ. ಸಹ ಬ್ಯಾಂಕ್ ಸಾಲ ನೀಡಲು ಮುಂದೆ ಬಂದಿದ್ದರೂ ಸಹ ಫಲಾನುಭವಿಗಳು ನಿರಾಸಕ್ತಿ ತೋರುಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈಗಾಗಲೇ ಫಲಾನುಭವಿಗಳ ಪಟ್ಟಿಯಲ್ಲಿ ಆಯ್ಕೆಯಾಗಿರುವ ಫಲಾನುಭವಿಗಳು ತಮ್ಮ ಪಾಲಿನ ಒಂದು ಲಕ್ಷ ಹಣವನ್ನು ನಗರಸಭೆಗೆ ಪಾವತಿಸಿರುವ ಫಲಾನುಭವಿಗಳಿಗೆ ಲಾಟರಿ ಮೂಲಕ ಮಾರ್ಚ್ 30 ರಂದು ವಿತರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಸ್ಪಷ್ಟಪಡಿಸಿದರು.

ಉಳಿದ ಫಲಾನುಭವಿಗಳು ಸಹ ಇನ್ನು ಒಂದು ವಾರದ ಒಳಗೆ ಒಂದು ಲಕ್ಷ ಹಣವನ್ನು ಕಟ್ಟಿದರೆ ಅವರಿಗೂ ಸಹ ಮೊದಲ ಅವಧಿಯ ಮನೆಗಳ ವಿತರಣೆಯಲ್ಲಿ ಅವರಿಗೂ ವಿತರಿಸಲಾಗುವುದು ಎಂದು ಹೇಳಿದರು.

ಪೌರಾಯುಕ್ತ ಕೃಷ್ಣಮೂರ್ತಿ, ಆಶ್ರಯ ಸಮಿತಿಯ ನಿರ್ದೇಶಕರಾದ ಶ್ರೀನಿವಾಸ್, ಅಮ್ಜದ್ ಪಾಷಾ ಮತ್ತು ಇತರರು ಉಪಸ್ಥಿತರಿದ್ದರು.

# ದೈಹಿಕ-ಮಾನಸಿಕ ಸದೃಢತೆಗೆ ಕ್ರೀಡಾಕೂಟ ಸಹಕಾರಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ನಿತ್ಯ ಕರ್ತವ್ಯವದ ಒತ್ತಡದಲ್ಲಿರುವ ನೌಕರರು ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಎಲ್ಲರೊಂದಿಗೂ ಬೆರೆತರೆ ಮಾನಸಿಕವಾಗಿ, ದೈಹಿಕವಾಗಿ ಆರೋಗ್ಯವಾಗಿರಲು ಸಹಕಾರಿಯಾಗುತ್ತದೆ ಎಂದು ತಾಲ್ಲೂಕು ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಲಕ್ಷ್ಮಣ್ ಹೇಳಿದರು.

ಪಟ್ಟಣ ಸಮೀಪದ ಹೊಯ್ಸಳ ಕ್ರೀಡಾಂಗಣದಲ್ಲಿ ಸೆಸ್ಕ್ ಬೇಲೂರು ಉಪ ವಿಭಾಗದಿಂದ ಸೆಸ್ಕ್‌ನ ವಿವಿಧ ಸೆಕ್ಷನ್‌ನ ತಂಡಗಳಿಗಾಗಿ ಆಯೋಜಿಸಿದ್ದ ಪವರ್ ಕಪ್ ಕ್ರಿಕೇಟ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಸರ್ಕಾರಿ ನೌಕರರಿಗೆ ದಿನ ನಿತ್ಯ ತಮ್ಮ ಕರ್ತವ್ಯದ ಒತ್ತಡ ಇರುತ್ತದೆ. ಇದರ ನಡುವೆಯೂ ಸಾಕಷ್ಟು ಜನರು ಇಲಾಖೆ ಹಾಗೂ ಇತರೆ ಕ್ರೀಡಾ ಕೂಟಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದು ಹೆಸರು ಪಡೆದಿರುವುದು ಕಾಣಬಹುದು. ಅದೇ ರೀತಿ ಬೇಲೂರಿನ ಸೆಸ್ಕ್ ವಿಭಾಗದಿಂದ ತಾಲೂಕಿನ ವಿವಿಧ ಸೆಕ್ಷನ್‌ನ 5 ತಂಡಗಳು ಭಾಗವಹಿಸಿ ಕ್ರೀಡಾ ಸ್ಫೂರ್ತಿ ಮೆರೆದಿರುವುದು ಶ್ಲಾಘನೀಯವಾಗಿದೆ. ಅಲ್ಲದೆ ಕ್ರೀಡೆಯಲ್ಲಿ ಗೆಲುವು, ಸೋಲು ಮುಖ್ಯವಲ್ಲ, ಭಾಗವಹಿಸುವುದು ಮುಖ್ಯ. ಆದ್ದರಿಂದ ಪ್ರತಿಯೊಬ್ಬರು ಒಂದಲ್ಲ ಒಂದು ಕ್ರೀಡೆಗಳಲ್ಲಿ ಭಾಗವಹಿಸಿ ಮಾನಸಿಕವಾಗಿ, ದೈಹಿಕವಾಗಿ ಸಧೃಡರಾಗಲು ಮುಂದಾದಾಗ ಮಾತ್ರ ತಮ್ಮ ವೃತ್ತಿಯಲ್ಲೂ ಉತ್ತಮ ಕೆಲಸ ಮಡಲು ಸಾಧ್ಯವಾಗುತ್ತದೆ ಎಂದರು.

ಸೆಸ್ಕ್ ಎಇಇ ಬಸವರಾಜು ಮಾತನಾಡಿ, ವರ್ಷಪೂರ್ತಿ ಒತ್ತಡದಲ್ಲೆ ಕೆಲಸ ನಿರ್ವಹಿಸುವ ನಮ್ಮ ನೌಕರರು ಒಂದೆರಡು ದಿನವಾದರೂ ಎಲ್ಲರೂ ಒಟ್ಟಾಗಿ ಇಂತಹ ಕ್ರೀಡಾಕೂಟಗಳಲ್ಲಿ ಒಂದೆಡೆ ಸೇರಿ ತಮ್ಮಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸುವ ಮೂಲಕ ಕ್ರೀಡೆಯಲ್ಲಿ ನಾವು ಯಾರಿಗೂ ಕಮ್ಮಿ ಇಲ್ಲ ಎಂಬುದನ್ನು ತೋರಿಸಿದ್ದಾರೆ. ನಮ್ಮ ಸೆಸ್ಕ್‌ನಿಂದ ಆಯೋಜಿಸಿರುವ ಈ ಕ್ರೀಡಾಕೂಟದಲ್ಲಿ ಸಾಕಷ್ಟು ಜನರು ಉತ್ತಮ ಆಟವಾಡಿದನ್ನು ನೋಡಿದ್ದೇನೆ. ಮುಂದಿನ ದಿನಗಳಲ್ಲೂ ಅವರು ಕರ್ತವ್ಯದೊಂದಿಗೆ ಆರೋಗ್ಯ ಕಾಪಾಡಿಕೊಂಡು ಮುಂದೆ ಸಾಗಲಿ. ಈಗ ಹೇಗೆ ಎಲ್ಲರೂ ಒಗ್ಗಟ್ಟಾಗಿದ್ದೀರೋ ಹಾಗೆಯೇ ಒಟ್ಟಾಗಿ ಕೆಲಸ ಮಾಡಿ ಎಂದು ಸಲಹೆ ನೀಡಿದರು.

ಸಿಇಸಿ ಸದಸ್ಯ ನವಾಜ್‌ಖಾನ್ ಮಾತನಾಡಿ, ಈ ಕ್ರೀಡಾಕೂಟದಲ್ಲಿ ಹೇಗೆ ಎಲ್ಲರೂ ಒಗ್ಗಟ್ಟಾಗಿ ಭಾಗವಹಿಸಿದ್ದೇವೋ ಹಾಗೆಯೇ ನಮ್ಮ ಸಂಘದಲ್ಲಿಯೂ ಒಗ್ಗಟ್ಟಾಗಿ ಮುಂದುವರಿದರೆ ಸಂಸ್ಥೆ ಖಾಸಗಿಯಾಗುವುದನ್ನ ತಪ್ಪಿಸಿ ಇಲಾಖೆಯನ್ನು ಉಳಿಸಿಕೊಳ್ಳಬಹುದು ಎಂದರು.

ಎಸ್‌ಎಸ್‌ಟಿ 66 ಘಟಕದ ಉಪಾಧ್ಯಕ್ಷ ಚಂದ್ರಶೇಖರ್, ಕೆಪಿಟಿಸಿಎಲ್ ಜೆಇ ನಾಗರಾಜ್, ಜೆಇ ಪವಿತ್ರ, ಮಂಜುನಾಥ್, ನಿರ್ದೇಶಕ ರಾಘವೇಂದ್ರ, ಕಾರ್ಯದರ್ಶಿ ದ್ವಾರಕನಾಥ್ ಇತರರಿದ್ದರು.

# ಅಧಿಕಾರಿಗಳು ಲೂಟಿ ಬಿಟ್ಟು ಪ್ರಾಮಾಣಿಕ ಕೆಲಸ ಮಾಡಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹೊಳೆನರಸೀಪುರ: ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು. ಲೂಟಿ ನಡೆದರೆ ಅದನ್ನು ಪ್ರಶ್ನಿಸುವುದು ನನ್ನ ಕರ್ತವ್ಯ. ವಿಧಾನಸಭೆಯಲ್ಲಿ ವಿಚಾರ ಪ್ರಸ್ತಾಪಿಸುವುದು ತಪ್ಪೇ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಅನ್ಯಾಯ ನಡೆಯುತ್ತಿದ್ದರೆ ಕಣ್ಮುಚ್ಚಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ನಾನು ಈಗ ಮಂತ್ರಿಯಾಗಿಲ್ಲ, ಸರ್ಕಾರವೂ ನಮ್ಮದಲ್ಲ. ಹೀಗಿರುವಾಗ ಅಧಿಕಾರಿಗಳಿಗೆ ಕಿರುಕುಳ ನೀಡುವ ಪ್ರಶ್ನೆಯೇ ಇಲ್ಲ ಎಂದು ಸಂಸದ ಶ್ರೇಯಸ್ ಪಟೇಲ್ ಅವರ ಆರೋಪಗಳಿಗೆ ತಿರುಗೇಟು ನೀಡಿದರು.

ಶ್ರೀ ಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವದ ವೇಳೆ ಅವ್ಯವಸ್ಥೆಗಳ ಕೊರತೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಬಟ್ಟೆ ಅಲಂಕಾರವಿಲ್ಲದೆ ತೇರು ಎಳೆಯಲಾಗಿದೆ. ಜಿಲ್ಲಾಧಿಕಾರಿ ಸ್ಥಳೀಯ ಶಾಸಕರಿಗೆ ಅಗೌರವ ತೋರಿದ್ದಾರೆ. ಈ ಸಂಬಂಧ ವಿಧಾನಸಭೆಯಲ್ಲಿ ಹಕ್ಕುಚ್ಯುತಿ ಮಂಡನೆಗೆ ಮನವಿ ಮಾಡಿರುವೆ ಎಂದು ಸ್ಪಷ್ಟನೆ ನೀಡಿದರು.

ಜಿಲ್ಲೆಯಲ್ಲಿ ಭೂ ಮಾಫಿಯಾ ಚಟುವಟಿಕೆಗಳು ಹೆಚ್ಚುತ್ತಿದೆ. ವಿಮಾನ ನಿಲ್ದಾಣಕ್ಕೆ ಮೀಸಲಿಟ್ಟ ಜಾಗವನ್ನೂ ಕಬಳಿಸುವ ಯತ್ನಗಳು ನಡೆಯುತ್ತಿವೆ.

ಯಾರ್‍ಯಾರು ಇದರಲ್ಲಿ ಭಾಗಿಯಾಗಿದ್ದಾರೆ, ಯಾವ ಅಧಿಕಾರಿಗಳು ಸಹಕಾರ ನೀಡುತ್ತಿದ್ದಾರೆ ಎಂಬುದರ ಬಗ್ಗೆ ಮಾಹಿತಿ ಇದೆ. ಸಮಯ ಬಂದಾಗ ದಾಖಲೆ ಸಹಿತ ಬಹಿರಂಗಪಡಿಸುತ್ತೇನೆ. ಕಲ್ಲೊಡೆಬಾರೆ ಕಾವಲಿನಲ್ಲಿ ಸುಮಾರು 95 ಸಾವಿರ ಮೆಟ್ರಿಕ್ ಟನ್ ಎಂ-ಸ್ಯಾಂಡ್ ಮತ್ತು ಜೆಲ್ಲಿ ಲೂಟಿ ನಡೆದಿದೆ. ಈ ಬಗ್ಗೆ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಹಂಗರಹಳ್ಳಿಯಲ್ಲಿ ಕಾನೂನು ಬದ್ಧವಾಗಿ ಕಾರ್ಯನಿರ್ವಹಿಸುತ್ತಿದ್ದ ಕ್ರಷರ್‌ನ್ನು ಡೀಮ್ಡ್ ಫಾರೆಸ್ಟ್ ಕಾರಣ ನೀಡಿ ನಿಲ್ಲಿಸಲಾಗಿದೆ. ಇನ್ನೊಂದೆಡೆ ಅರಣ್ಯ ಪ್ರದೇಶದಲ್ಲೇ ನಡೆಯುತ್ತಿರುವ ಕ್ರಷರ್‌ಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ.

ಇತ್ತೀಚಿನ ಆಡಳಿತದಲ್ಲಿ ಜನರಿಗೆ ತೊಂದರೆ ಹೆಚ್ಚಾಗಿದ್ದು, ಕೆಲಸಗಳು ಆಗುತ್ತಿಲ್ಲ. ಕಾನೂನುಬಾಹಿರ ಚಟುವಟಿಕೆಗಳನ್ನು ಪ್ರಶ್ನಿಸುವುದು ತಪ್ಪೇ ಎಂದು ಕೇಳಿದರು.

ಹಾಸನ ಹಿಮ್ಸ್ ಆಸ್ಪತ್ರೆ ದನದ ದೊಡ್ಡಿಯಂತಾಗಿದೆ. ಈ ಬಗ್ಗೆ ಜಿಲ್ಲಾಧಿಕಾರಿ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಬೇಕು. ಹೊಳೆನರಸೀಪುರ ಆಸ್ಪತ್ರೆಯಲ್ಲಿ ಅಗತ್ಯ ಸೌಲಭ್ಯಗಳು ಮತ್ತು ವೈದ್ಯರನ್ನು ಒದಗಿಸಲಾಗಿದೆ ಎಂದರು.

# ಸರ್ಕಾರಿ ಶಾಲಾ ಮಕ್ಕಳಿಗೆ ಕಲಿಕೋಪಕರಣ ವಿತರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನ ಅಚ್ಚನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಅಂಗನವಾಡಿ ಕೇಂದ್ರದ ಮಕ್ಕಳಿಗೆ ಬೆಂಗಳೂರಿನ ಟೇಲ್ಸ್ ಆನ್ 2 ವೀಲ್ಸ್ ರೈಡರ್ಸ್ ಗ್ರೂಪ್ ವತಿಯಿಂದ' ಶೈಕ್ಷಣಿಕ ಹಾಗೂ ಆರೋಗ್ಯ ರಕ್ಷಣಾ ಸಾಮಗ್ರಿ ವಿತರಿಸಲಾಯಿತು.

ಗ್ರಾಮೀಣ ಭಾಗದ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ, ಕುಡಿಯುವ ನೀರಿನ ಶುದ್ಧೀಕರಣಕ್ಕಾಗಿ ವಾಟರ್ ಫಿಲ್ಟರ್, ಚಳಿಗಾಲದ ರಕ್ಷಣೆಗಾಗಿ ಸ್ವೆಟರ್ ಹಾಗೂ ಮಕ್ಕಳಿಗೆ ಓದಲು ಅನುಕೂಲವಾಗುವಂತೆ ಸ್ಟಡಿ ಟೇಬಲ್ ಮತ್ತು ಕುರ್ಚಿಗಳನ್ನು ನೀಡಲಾಯಿತು.

ಕ್ರಯಾನ್ಸ್, ಕಲರ್ ಪೆನ್, ಪೆನ್ಸಿಲ್, ಕಂಪಾಸ್ ಬಾಕ್ಸ್ ಸೇರಿ



ವಿವಿಧ ಶೈಕ್ಷಣಿಕ ಕಿಟ್ ಹಾಗೂ ಸಿಹಿ ತಿಂಡಿಗಳನ್ನು ಮಕ್ಕಳಿಗೆ ವಿತರಿಸಲಾಯಿತು.

ದೇವಾಲದಕೆರೆ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಪೂರ್ಣೇಶ್ ಮಾತನಾಡಿ, ಇಂದಿಗೂ ಗ್ರಾಮೀಣ ಭಾಗದ ಶಾಲೆಗಳಲ್ಲಿ ಮೂಲಸೌಲಭ್ಯಗಳ ಕೊರತೆಯಿದೆ. ಇಂತಹ ಸಂದರ್ಭದಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಮುಂದೆ ಬಂದು ನೆರವಾಗುತ್ತಿರುವುದು ಶ್ಲಾಘನೀಯ. ಇಂತಹ ಸಣ್ಣ ಸಹಾಯಗಳು ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಿ ಅವರ ಭವಿಷ್ಯವನ್ನು ಬೆಳಗಲು ಸಹಕಾರಿಯಾಗಲಿವೆ. ಮೂಲಭೂತ ಸೌಲಭ್ಯಗಳ ಕೊರತೆ ನೀಗಿಸಲು ಸಂಘಟನೆಗಳ ನೆರವು ಅಗತ್ಯ ಎಂದು ತಿಳಿಸಿದರು.

ದಾನಿಗಳಿಂದ ಲಭಿಸಿದ ಈ ಸಾಮಗ್ರಿ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸಲು ಪೂರಕವಾಗಿವೆ ಎಂದ ಅವರು, ಅಂಗನವಾಡಿ ಕಾರ್ಯಕರ್ತೆಯರು ಕೂಡ ಈ ನೆರವಿನಿಂದ ಮಕ್ಕಳ ಪೌಷ್ಟಿಕತೆ ಹಾಗೂ ಕಲಿಕೆಯ ವಾತಾವರಣ ಸುಧಾರಿಸಲಿದೆ ಎಂದು ಹೇಳಿದರು.

ರೈಡರ್ಸ್ ತಂಡದ ಡಾ. ರಘು ಮಾತನಾಡಿ, ಮುಂದಿನ ದಿನಗಳಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಹತ್ತಾರು ಸೇವಾ ಚಟುವಟಿಕೆಗಳನ್ನು ಮುಂದುವರಿಸುವುದಾಗಿ ತಿಳಿಸಿದರು.

ಶಾಲೆಯ ಮುಖ್ಯೋಪಾಧ್ಯಾಯ ಪ್ರಭು, ಅಂಗನವಾಡಿ ಬಿ.ಕೆ.ಜ್ಯೋತಿ, ರೋಷನ್, ಹರೀಶ್, ಜಯ್ ತ್ರಿವೇದಿ, ಸ್ವಪ್ನ, ಶ್ರೇಯಸ್ ಇತರರಿದ್ದರು.

## ಜೂಜಾಟ: ಐವರ ಬಂಧನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಜೂಜು ಅಡ್ಡೆ ಮೇಲೆ ದಾಳಿ ನಡೆಸಿದ ಪೊಲೀಸರು ಐದು ಜನರನ್ನು ಬಂಧಿಸಿ ಪಣಕ್ಕಿಟ್ಟಿದ್ದ 2650 ರೂ. ವಶಪಡಿಸಿಕೊಂಡಿರುವ ಘಟನೆ ತಾಲ್ಲೂಕಿನ ಬೊಮ್ಮೇನಹಳ್ಳಿ-ಕೊತ್ತನಘಟ್ಟ ಗೇಟ್ ಮಧ್ಯದ ಜಮೀನಿನಲ್ಲಿ ನಡೆದಿದೆ. ಕೊತ್ತನಘಟ್ಟ ಗ್ರಾಮದ ಶರತ್, ನಾಗರಾಜು, ಮಂಜೇಗೌಡ, ಮೋಹನ ಹಾಗು ಸುನಿಲ್ ಬಂಧಿತರು. ಮಾ. 21 ರಂದು ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದಾಗ ಸಿಕ್ಕಿ ಬಿದ್ದಿದ್ದಾರೆ. ಶ್ರವಣಬೆಳಗೊಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಇತಿಹಾಸದಲ್ಲಿ ಈ ದಿನ

### ಮಾರ್ಚ್-24

1882: ಜರ್ಮನ್ ವಿಜ್ಞಾನಿ ರಾಬರ್ಟ್ ಕೊಚ್ ಕ್ಷಯರೋಗ (ಟಿಬಿ) ಬ್ಯಾಕ್ಟೀರಿಯಾಗೆ ಕಾರಣವಾದ ಜೀವಾಣುವನ್ನು ಕಂಡುಹಿಡಿದರು.

1946: ಕ್ಯಾಬಿನೆಟ್ ಮಿಷನ್ ಭಾರತಕ್ಕೆ ಆಗಮಿಸಿ ಸ್ವಾತಂತ್ರ್ಯದ ಮಾರ್ಗಕ್ಕೆ ದಾರಿ ತೆರೆದಿತು.

1977: ಮುರಾರ್ಜಿ ದೇಸಾಯಿ ಭಾರತ ದೇಶದ ಮೊದಲ ಕಾಂಗ್ರೆಸ್ ಪ್ರಧಾನಿಯಾಗಿ ಪದಗ್ರಹಣ ಮಾಡಿದರು.

1999: ನ್ಯಾಟೋ ದಳಗಳು ಯುಗೋಸ್ಲಾವಿಯಾ ಮೇಲೆ ವಾಯು ದಾಳಿ ಆರಂಭಿಸಿತು.

**ಜನನ**

1874: ಹ್ಯಾರಿ ಹೌಡಿನಿ, ಖ್ಯಾತ ಜಾದೂಗಾರ ಮತ್ತು ಎಸ್ಕೇಪ್ ಆರ್ಟಿಸ್ಟ್

1930: ಸ್ಟೀವ್ ಮಕ್ವೀನ್, ಹಾಲಿವುಡ್‌ನ ಪ್ರಸಿದ್ಧ ನಟ

**ಮರಣ**

1905: ಜೂಲ್ಸ್ ವರ್ನೆ, ಪ್ರಸಿದ್ಧ ಫ್ರೆಂಚ್ ಕಾದಂಬರಿಕಾರ

2008: ರಿಚರ್ಡ್ ವಿಡ್ಮಾರ್ಕ್, ಖ್ಯಾತ ನಟ

## ಜಮೀನು ವ್ಯಾಜ್ಯ: ಮಹಿಳೆ ಮೇಲೆ ಸಂಬಂಧಿಕರ ಹಲ್ಲೆ



ಅರಕಲಗೂಡು: ಜಮೀನು ವಿಚಾರವಾಗಿ ಎರಡು ಕುಟುಂಬಗಳ ನಡುವೆ ಗಲಾಟೆ ನಡೆದು ಮಹಿಳೆ ಮೇಲೆ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ತೇಜೂರು ಗ್ರಾಮದಲ್ಲಿ ನಡೆದಿದ್ದು ತಡವಾಗಿ ಬೆಳಕಿಗೆ ಬಂದಿದೆ.

ಗ್ರಾಮದ ಜಯಲಕ್ಷ್ಮಿ ಎಂಬುವವರ ಮೇಲೆ ಸಂಬಂಧಿಕರಾದ ರಾಮೇಗೌಡರ ಹೆಂಡತಿ ಹೊನ್ನಮ್ಮ, ಸೊಸೆಯಂದಿರಾದ ಮಮತ, ಭಾಗ್ಯ, ಶ್ವೇತಾ ಹಾಗೂ ಲಕ್ಷ್ಮಿ ಎಂಬುವವರು ಹಲ್ಲೆ ನಡೆಸಿದ್ದಾರೆ.

ಗಾಯಾಳು ಜಯಲಕ್ಷ್ಮಿ ಅವರ ಪತಿ ಪಾರ್ಶ್ವವಾಯು ಸಮಸ್ಯೆಯಿಂದ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಹೀಗಾಗಿ ಜಯಲಕ್ಷ್ಮಿ ಅವರೇ ಜಮೀನು ನೋಡಿಕೊಳ್ಳುತ್ತಿದ್ದಾರೆ. ಸರ್ವೆ ನಂ. 55ರ ಜಮೀನಿನಲ್ಲಿ ಜಯಲಕ್ಷ್ಮಿ ಸ್ವಾಧೀನದಲ್ಲಿದ್ದಾರೆ. ಆದರೆ ಇತ್ತೀಚೆಗೆ ರಾಮೇಗೌಡರ ಕುಟುಂಬಸ್ಥರು ಜಮೀನು ತಮಗೆ ಸೇರಿದ್ದೆಂದು ತಗಾದೆ ತೆಗೆದಿದ್ದರು. ಈ ಸಂಬಂಧ ಜಯಲಕ್ಷ್ಮಿ ಪೊಲೀಸ್ ಠಾಣೆ ಮೆಟ್ಟಿಲೇರಿದ್ದರು ಎನ್ನಲಾಗಿದೆ.

### ಸಂಧಾನಕ್ಕೆ ಬಂದವನ ಮೇಲೂ ಹಲ್ಲೆ

ಜಮೀನು ವ್ಯಾಜ್ಯ ಕುರಿತು ರಾಜಿ ಪಂಚಾಯಿತಿ ಮೂಲಕ ಬಗೆಹರಿಸುವುದಕ್ಕಾಗಿ ತೆರಳಿದ್ದ ಚಂದ್ರು ಎಂಬುವವರ ಮೇಲೂ ರಾಮೇಗೌಡನ ಮಕ್ಕಳು ಹಲ್ಲೆ ಮಾಡಿದ್ದಾರೆ. ನಮ್ಮ ಜಮೀನು ವಿಚಾರ ನಾವು ನೋಡಿಕೊಳ್ಳುತ್ತೇವೆ. ನೀನು ಮಧ್ಯ ಬರುವ ಅವಶ್ಯಕತೆಯಿಲ್ಲ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಮನಬಂದಂತೆ ಥಳಿಸಿದ್ದಾರೆ. ಅರಕಲಗೂಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಲೆನಾಡಿನ ರಸ್ತೆ ಅಭಿವೃದ್ಧಿ ವಿಶೇಷ ಪ್ಯಾಕೇಜ್ ಘೋಷಿಸಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಸಕಲೇಶಪುರ: ಮಲೆನಾಡು ಭಾಗದ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಆಗ್ರಹಿಸಿದರು.

ತಾಲೂಕಿನ ಹಾನುಬಾಳು ಮುಖ್ಯ ರಸ್ತೆಯಿಂದ (ವೆಂಕಟಹಳ್ಳಿ) ಜಂಬರಡಿ ರಾಗಿ ಗುಂಡಿ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿ, ಸಾರ್ವಜನಿಕರ ಬಹುದಿನಗಳ ಬೇಡಿಕೆಯಾಗಿದ್ದ ಈ ರಸ್ತೆಯನ್ನು 2 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದೆ ಎಂದರು.

ನಾನು ಶಾಸಕನಾದ ನಂತರ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಎತ್ತಿನಹೊಳೆ ಯೋಜನೆಯಡಿ 500 ಕೋಟಿ ರೂ. ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದೆ. ಅದರ ಫಲವಾಗಿ ಈಗ 72 ಕೋಟಿ ರೂ. ಬಿಡುಗಡೆಯಾಗಿದೆ. ಎತ್ತಿನಹೊಳೆ ಯೋಜನೆಯಿಂದ ತಾಲೂಕಿನ ಪರಿಸರಕ್ಕೆ ಅಪಾರ ಹಾನಿಯಾಗಿದ್ದರೂ, ನಮ್ಮ ಕ್ಷೇತ್ರದ ಜನತೆ ಬಯಲುಸೀಮೆ ಜಿಲ್ಲೆಗಳ ಜನರಿಗಾಗಿ ಕುಡಿಯುವ ನೀರನ್ನು ಬಿಟ್ಟುಕೊಟ್ಟಿದ್ದಾರೆ. ಈ ಯೋಜನೆಯಿಂದ ಏಳು ಜಿಲ್ಲೆಗಳ ಸುಮಾರು 70 ಲಕ್ಷ ಜನರಿಗೆ ಲಾಭವಾಗಲಿದೆ ಎಂದು ಹೇಳಿದರು.

ಹಾನುಬಾಳು ಜಿ.ಪಂ. ವ್ಯಾಪ್ತಿಯ ಕ್ಯಾಮನಹಳ್ಳಿ, ದೇವಲದಕೆರೆ, ಹಾನುಬಾಳು ಹಾಗೂ ಹೆಬ್ಬಸಾಲೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಈಗಾಗಲೇ ಹಲವಾರು ರಸ್ತೆ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಅಧಿಕಾರ ಸಿಕ್ಕಾಗ ನಿಷ್ಠೆಯಿಂದ ಕೆಲಸ ಮಾಡಿದರೆ ಮಾತ್ರ ಅಭಿವೃದ್ಧಿ ಸಾಧ್ಯ. ಕ್ಷೇತ್ರದ ಸರ್ವತೋಮುಖ ಏಳಿಗೆಗಾಗಿ ನಾನು ಶಕ್ತಿಮೀರಿ ಶ್ರಮಿಸುತ್ತಿದ್ದೇನೆ ಎಂದರು.

ಬಿಜೆಪಿ ಮುಖಂಡರಾದ ಕ್ಯಾಮನಹಳ್ಳಿ ರಾಜ್ ಕುಮಾ,ರ್ ಜಂಬರಡಿ ಲೋಹಿತ್, ಅಗ್ನಿ ಸೋಮಶೇಖರ್, ಗುತ್ತಿಗೆದಾರ ರಾಜೀವ್ ಸೇರಿದಂತೆ ಅನೇಕ ಗಣ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಅಪಘಾತದಲ್ಲಿ ವ್ಯಕ್ತಿ ಸಾವು

ಹಾಸನ: ಎರಡು ಸ್ಕೂಟರ್ ನಡುವೆ ಸಂಭವಿಸಿದ ಅಪಘಾತದಲ್ಲಿ ವ್ಯಕ್ತಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಮಣಚನಹಳ್ಳಿ ಸಮೀಪ ನಡೆದಿದೆ.

ಮಣಚನಹಳ್ಳಿಯ ಲೋಕೇಶ್ ಮೃತರು. ಶನಿವಾರ ಸ್ಕೂಟರ್‌ನಲ್ಲಿ ತಣ್ಣೀರುಹಳ್ಳದಿಂದ ಮನೆಗೆ ಹೋಗುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಸ್ಕೂಟರ್ ಡಿಕ್ಕಿಯಾಗಿದೆ. ಸ್ಥಳೀಯರು ಕೂಡಲೇ ಅಂಬುಲೆನ್ಸ್ ಖಾಸಗಿ ಆಸ್ಪತ್ರೆಗೆ ದಾಖಲಿಸಿ ನಂತರ ಹಿಮ್ಸ್‌ಗೆ ದಾಖಲಿಸಿದರು. ತೀವ್ರ ರಕ್ತಸ್ರಾವವಾದ್ದರಿಂದ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248